ಎಲ್ಲಾ ವಿಮರ್ಶಕರವರೆಗೂ ಭೈರಪ್ಪನವರು ಹಾಗೆಯೇ ನಿರ್ಲಿಪ್ತರಾಗಿರುತ್ತಿದ್ದರು. ಪ್ರಗತಿಶೀಲರ ನಂತರ ನವ್ಯರ ವೇಳೆ ವಿಮರ್ಶಕರ ಪ್ರಾದುರ್ಭಾವ ತೀವ್ರವಾಗಿದ್ದು, ಅದಾಗ ಎಲ್ಲ ಲೇಖಕರೂ ವಿಮರ್ಶಕರ ಮುಖ ನೋಡಿಕೊಂಡೇ ತಮ್ಮ ಕೃತಿ ರಚಿಸುತ್ತಿದ್ದ ಕಾಲವಾಗಿತ್ತು. ಒಬ್ಬೊಬ್ಬ ಲೇಖಕನದೂ ಒಂದೊಂದು ವಿಮರ್ಶಾವಲಯ ಎಂಬಂತಿತ್ತು. ಹಾಗಾಗಿ ಭೈರಪ್ಪನವರ ಕೃತಿಗಳನ್ನು ಕುರಿತಾಗಿ ಇತ್ತ ಹೊಗಳಿಕೆಯೋ ಅತ್ತ ತೆಗಳಿಕೆಯೋ ಇರುತ್ತಿತ್ತು. ಈ ವಿದ್ಯಮಾನವೆಲ್ಲ ಭೈರಪ್ಪನವರ ಮನದಲ್ಲಿ ಬೇರೂರಿದ್ದು, ಯಾವ ಗಂಭೀರ ವಿಮರ್ಶಕರ ಪರಿಚಯವೂ ತಮಗಿಲ್ಲ ಎಂಬಂತಿರುತ್ತಿದ್ದರು. ಇದೆಲ್ಲದರ ನಡುವೆ ಈ ಮೊದಲೇ ಹೇಳಿದಂತೆ ಅವರಿಗೆ ತಮ್ಮದೇ ಪ್ರವಾಸ, ಅದರ ಅನುಭವ, ಕಾದಂಬರಿ ಬರೆಯಲು ತೊಡಗುವುದು, ಹಾಗೆ ಬರಹ ಆರಂಭಿಸುವಲ್ಲಿ ಲೋಕದ ಗೊಡವೆಯೇ ಇಲ್ಲ ಎಂಬಂತಿರುವುದು; ಬರೆದ ಮುನ್ನೂರು, ನಾನೂರು, ಐನೂರು ಪುಟಗಳನ್ನು ಮತ್ತೆ ಮತ್ತೆ ಮೂರ್ನಾಲ್ಕು ಬಾರಿಯಾದರೂ ತಿರುತಿರುಗಿ ಬರೆಯುವುದು, ಇಂಥ ಏಕಾಂತದಲ್ಲಿ ಇರುತ್ತಿದ್ದರು. ಆ ಸಮಯದಲ್ಲಿ ಅವರತ್ತ ಯಾರೂ ಸುಳಿಯುವಂತಿರಲಿಲ್ಲ. ಇಷ್ಟರ ಮೇಲೆ ಅಭಿಮಾನಿಗಳು ಬಂದು ತಮ್ಮನ್ನು ಕಾಣಬೇಕು, ಬರೆದ ಬರಹಗಳನ್ನು ಮೆಚ್ಚಬೇಕು ಎಂಬ ಮೋಹ ಅವರಿಗೆ ಇದ್ದಂತಿರಲಿಲ್ಲ. ಇದಕ್ಕಿರುವ ಕಾರಣ ಎಂಬತ್ತು ತೊಂಬತ್ತರ ಹೊತ್ತಿಗೆ ಭೈರಪ್ಪನವರಿಗೆ ಓದುಗರ ಸಂಖ್ಯೆ ಅಪಾರವಾಗಿಯೇ ಇದ್ದಿತು. ಎಲ್ಲ ವರ್ಗದವರೂ ಅವರ ಕೃತಿಗಳನ್ನು ಓದುವವರಾಗಿ, ಅದರಲ್ಲಿ ಮಹಿಳೆಯರೂ ಅಪಾರವಾಗಿ ಇದ್ದರು. ಅವರ ಬರವಣಿಗೆಯಲ್ಲಿ ವ್ಯಾಪಕ ಲೋಕಾನುಭವಗಳೊಡನೆ ಭಾವುಕ ಸಂಗತಿಗಳೂ, ಜೀವನ ಸಂಘರ್ಷಗಳೂ ಇರುತ್ತಿದ್ದವಲ್ಲ!

ಆರಂಭಕ್ಕೆ ಹೇಳಿದಂತೆ ಭೈರಪ್ಪನವರು ತಮ್ಮ ಕೃತಿಗಳನ್ನು ಓದಿದವರೊಡನೆ ಮಾತ್ರ ಸಂಭಾಷಿಸಲು ಇಷ್ಟಪಡುತ್ತಿದ್ದರೇ ಅಂದರೆ ಒಮ್ಮೊಮ್ಮೆ ಅದು ಹಾಗೂ ಇರುತ್ತಿರಲಿಲ್ಲ! ಭೈರಪ್ಪನವರು ಅವರ ಊರಾದ ಸಂತೆಶಿವರಕ್ಕೆ ಆಗಾಗ ಹೋಗುತ್ತಾ, ಅಲ್ಲಿ ಅವರಿಗೆ ಕೃಷ್ಣಪ್ರಸಾದರೆಂಬ ಸಂಬಂಧಿಕರು ಇದ್ದರು. ತಮ್ಮ ಬಾಲ್ಯಕಾಲದ ಮನೆಯನ್ನು ಕೆಡವಿ ಅಲ್ಲೊಂದು ದೊಡ್ಡ ಹಾಲಿನ ಮನೆಯನ್ನು ಕಟ್ಟಿಸುವವರಿದ್ದರು. ಹಾಗೆ ಕಟ್ಟಿಸಿದ ಆ ಕಟ್ಟಡದ ಉದ್ಘಾಟನಾ ಕಾರ್ಯಕ್ರಮಕ್ಕೆ ಭೈರಪ್ಪನವರೊಂದಿಗೆ ನಾನು ಹೋಗಿದ್ದೆ. ಚನ್ನರಾಯಪಟ್ಟಣದ ಮುಖ್ಯರಸ್ತೆಯನ್ನು ಬಿಟ್ಟು ಒಳದಾರಿಯಲ್ಲಿ ಉತ್ತರಕ್ಕೆ ಹೋದರೆ, ಎರಡೇ ಬೀದಿಗಳ ಊರು ಸಂತೆಶಿವರ. ಊರ ಈಚಿನ ಪೂರ್ವದ ತುದಿಯಲ್ಲಿ ಒಂದೆರಡು ದೇವಸ್ಥಾನಗಳಿದ್ದರೆ, ಪಶ್ಚಿಮಕ್ಕೆ ದೊಡ್ಡ ಕೆರೆ. ಆ ಕೆರೆಯ ಬಳಿ ನಿಂತು ತಮ್ಮ ಬಾಲ್ಯದ ಕಣ್ಣುಗಳಲ್ಲಿ ನೀರಿನ ವಿಸ್ತಾರವನ್ನು ನೋಡುತ್ತಿದ್ದ ಭೈರಪ್ಪನವರು, ‘ನಾನು

